# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1411 |
| ಸದಸ್ಯರ ಹೆಸರು | : | ಶ್ರೀ.ಸುನಿಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 09.03.2022 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಮಂಜೂರಾದ ಪಶುವೈದ್ಯಾಧಿಕಾರಿಗಳು, ಕಿರಿಯ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಸಹಾಯಕರ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು ಮಂಜೂರಾದ ಪಶುವೈದ್ಯಾಧಿಕಾರಿಗಳು, ಕಿರಿಯ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಸಹಾಯಕರ ಹುದ್ದೆಗಳ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಇರುವ ವಿವರವನ್ನು <u>ಅನುಬಂಧ-1</u> ರಲ್ಲಿ ನೀಡಿದೆ. |
| ಆ) | ರಾಜ್ಯದಲ್ಲಿ ಖಾಲಿ ಉಳಿದಿರುವ ಪಶುವೈದ್ಯಾಧಿಕಾರಿಗಳ ಹುದ್ದೆ ಭರ್ತಿ ಮಾಡದಿರುವುದರಿಂದ ಅನಾರೋಗ್ಯ ಪೀಡಿತ ಜಾನುವಾರುಗಳಿಗೆ ಚಿಕಿತ್ಸೆ ಕೊಡಿಸಲು ರೈತರು ಅನುಭವಿಸುತ್ತಿರುವ ಸಮಸ್ಯೆಗಳ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಪರ್ಯಾಯ ಕ್ರಮ ಕೈಗೊಳ್ಳಲಾಗಿದೆಯೇ; | ಹೌದು.<br><br>ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಪ್ರಸ್ತುತ 400 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆಯು ಅನುಮತಿ ನೀಡಿದ್ದು, ಈ ಸಂಬಂಧ ನೇರ ನೇಮಕಾತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ, ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿರುತ್ತದೆ.<br><br>ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳಲ್ಲಿ ಶೇಕಡಾ 50 ಮುಂಬಡ್ತಿ ಹಾಗೂ ಶೇಕಡಾ 50 ನೇರ ನೇಮಕಾತಿ ಹುದ್ದೆಗಳಾಗಿದ್ದು, ಪ್ರಸ್ತುತ ಮುಂಬಡ್ತಿ ಹುದ್ದೆಗಳನ್ನು ಕಿರಿಯ ಪಶುವೈದ್ಯಕೀಯ ಪರೀಕ್ಷರ ಹುದ್ದೆಯಿಂದ ಸ್ಥಾನಪನ್ನ ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | ಕಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳಲ್ಲಿ ಶೇಕಡಾ 25 ಮುಂಬಡ್ತಿ ಹಾಗೂ ಶೇಕಡಾ 75 ನೇರ ನೇಮಕಾತಿ ಹುದ್ದೆಗಳಾಗಿದ್ದು, ಪ್ರಸ್ತುತ ಮುಂಬಡ್ತಿ ಹುದ್ದೆಗಳನ್ನು "ಡಿ" ದರ್ಜೆ ಹುದ್ದೆಯಿಂದ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಖಾಲಿ ಇರುವ ಲಿಪಿಕ ವರ್ಗದ ಹುದ್ದೆಗಳನ್ನು, 'ಡಿ' ದರ್ಜೆ ಮತ್ತು ವಾಹನ ಚಾಲಕರ ಹುದ್ದೆಗಳನ್ನು ಅನುಕಂಪಾರ್ಥ ಅರ್ಹತೆ ಆಧಾರದ ಮೇಲೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುತ್ತಿದೆ.<br><br>ಖಾಲಿ ಇರುವ ಹುದ್ದೆಗಳಿಗೆ ಅಧಿಕ ಪ್ರಭಾರ ವ್ಯವಸ್ಥೆ ಮಾಡಿ ರೈತರ ಜಾನುವಾರುಗಳಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಖಾಲಿ ಉಳಿದಿರುವ ಪಶುವೈದ್ಯಾಧಿಕಾರಿಗಳ ಹುದ್ದೆ ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು) | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಪ್ರಸ್ತುತ 400 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆಯು ಅನುಮತಿ ನೀಡಿದ್ದು, ಈ ಸಂಬಂಧ ನೇರ ನೇಮಕಾತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿರುತ್ತದೆ. |
| ಈ) | ಪ್ರಸ್ತುತ ಪಶುವೈದ್ಯಕೀಯ ಇಲಾಖೆಯಿಂದ ಬೇರೆ ಇಲಾಖೆಗಳಿಗೆ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; ನಿಯೋಜನೆ ಮಾಡಿದ್ದಲ್ಲಿ, ನಿಯೋಜನೆಯನ್ನು ರದ್ದು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಎಲ್ಲಾ ವೃಂದದ ಒಟ್ಟು 131 ಅಧಿಕಾರಿಗಳು/ ನೌಕರರು ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ.<br>ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-71/ಪಸಸೇ/2021 ಬೆಂಗಳೂರು ದಿನಾಂಕ:06-07-2021 ರನ್ವಯ ಮರಳಿ ಇಲಾಖೆಗೆ ಬರುವಂತೆ ಆದೇಶಿಸಲಾಗಿರುತ್ತದೆ.<br><br>ಅದರಂತೆ ಪಶುಸಂಗೋಪನಾ ಇಲಾಖೆಯ ಪೂರಕ ಚಟುವಟಿಕೆಗಳ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನಿಗಮ/ ಮಂಡಳಿ/ |

| | | |
|---|---|---|
| | | ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿದಂತೆ ಉಳಿದ ನಿಗಮ ಮಂಡಳಿಗಳಿಂದ ಪಶುವೈದ್ಯರುಗಳು ವಾಪಸ್ಸು ಇಲಾಖೆಯ ಸೇವೆಗೆ ಬಂದಿರುತ್ತಾರೆ. ಆದರೆ, ಪಶುವೈದ್ಯಾಧಿಕಾರಿಗಳಲ್ಲಿ 4 ಅಧಿಕಾರಿಗಳು ಹಾಗೂ ಅಪಿಕ ವೃಂದದಲ್ಲಿ 3 ಸಿಬ್ಬಂದಿಗಳು ಮಾತ್ರ ಇಲಾಖೆಗೆ ಬಂದಿರುವುದಿಲ್ಲ. ಇವರಿಗೆ ಈಗಾಗಲೇ ಮಾತ್ರ ಇಲಾಖೆಗೆ ಹಾಜರಾಗುವಂತೆ ಸೂಚಿಸಲಾಗಿದೆ. |
| ಉ) | ರಾಜ್ಯದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಪಶುವೈದ್ಯಕೀಯ ಕಾಲೇಜುಗಳು/ ವೆಟರ್ನರಿ ಕಾಲೇಜುಗಳ ಸಂಖ್ಯೆ ಎಷ್ಟು; ಬೆಂಗಳೂರು ಹೊರತುಪಡಿಸಿ ರಾಜ್ಯದ ಕಲ್ಯಾಣ ಕರ್ನಾಟಕ ಭಾಗ, ಉತ್ತರ ಕರ್ನಾಟಕ ಹಾಗೂ ಕರಾವಳಿ ಭಾಗದಲ್ಲಿ ಹೊಸದಾಗಿ ಪಶುವೈದ್ಯಕೀಯ ಕಾಲೇಜು/ ವೆಟರ್ನರಿ ಕಾಲೇಜು ಸ್ಥಾಪನೆ ಮಾಡುವ ಪ್ರಸ್ತಾವನೆ ಅಥವಾ ಚಿಂತನೆ ಸರ್ಕಾರದ ಮುಂದಿದೆಯೇ? | ರಾಜ್ಯದ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಅಡಿಯಲ್ಲಿ ಒಟ್ಟು 05 ಪಶುವೈದ್ಯಕೀಯ ಕಾಲೇಜುಗಳು/ವೆಟರ್ನರಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.<br><br>ಬೆಂಗಳೂರು ಹೊರತುಪಡಿಸಿ ಉತ್ತರ ಕರ್ನಾಟಕ ಭಾಗದ ಅಥಣಿಯಲ್ಲಿ ಮತ್ತು ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ಹೊಸ ಪಶುವೈದ್ಯಕೀಯ ಕಾಲೇಜು ಈಗಾಗಲೇ ಮಂಜೂರಾಗಿದ್ದು, ಕಟ್ಟಡ ಕಾಮಗಾರಿ ಹಾಗೂ ಮೂಲಭೂತ ಸೌಕರ್ಯಗಳ ಒದಗಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ಕಟ್ಟಡ ಕಾಮಗಾರಿ, ಮೂಲಭೂತ ಸೌಕರ್ಯ ಹಾಗೂ ಹುದ್ದೆಗಳ ಮಂಜೂರಾತಿ ಆದ ನಂತರ ಭಾರತೀಯ ಪಶುವೈದ್ಯಕೀಯ ಪರಿಷತ್ತು ನವದೆಹಲಿ ಪರಿವೀಕ್ಷಣ ತಂಡ ಭೇಟಿ ನೀಡಿ ಅನುಮತಿ ನೀಡಿದ ನಂತರ ಕಾಲೇಜು ಪ್ರಾರಂಭ ಮಾಡಲಾಗುವುದು. |

ಸಂ: ಪಸಂಮೀ ಇ-43 ಪಸಸೇ 2022

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು

# ಅನುಬಂಧ

| ಕ್ರ.ಸಂ | ಜಿಲ್ಲೆಗಳ ಹೆಸರು | ಪಶುವೈದ್ಯಾಧಿಕಾರಿ | | | ಹಿರಿಯ ಪಶುವೈದ್ಯಾಧಿಕಾರಿ | | | ಮುಖ್ಯ ಪಶುವೈದ್ಯಾಧಿಕಾರಿ | | | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | | | ಪಶುವೈದ್ಯಕೀಯ ಪರೀಕ್ಷಕರು | | | ಕಿರಿಯ ಪಶುವೈದ್ಯಕೀಯ ಪರೀಕ್ಷಕರು | | | ಒಟ್ಟು | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ |
| 1 | ಬೆಂಗಳೂರು ನಗರ | 31 | 27 | 4 | 30 | 30 | 0 | 27 | 27 | 0 | 59 | 52 | 7 | 44 | 44 | 0 | 51 | 44 | 7 | 242 | 224 | 18 |
| 2 | ಬೆಂಗಳೂರು ಗ್ರಾಮಾಂತರ | 36 | 33 | 3 | 24 | 24 | 0 | 24 | 24 | 0 | 57 | 37 | 20 | 35 | 25 | 10 | 56 | 31 | 25 | 232 | 174 | 58 |
| 3 | ರಾಮನಗರ | 62 | 21 | 41 | 15 | 13 | 2 | 13 | 13 | 0 | 52 | 38 | 14 | 54 | 34 | 20 | 60 | 22 | 38 | 256 | 141 | 115 |
| 4 | ತುಮಕೂರು | 59 | 17 | 42 | 52 | 47 | 5 | 39 | 39 | 0 | 110 | 84 | 26 | 106 | 77 | 29 | 127 | 66 | 61 | 493 | 330 | 163 |
| 5 | ಚಿತ್ರದುರ್ಗ | 62 | 11 | 51 | 29 | 27 | 2 | 18 | 18 | 0 | 84 | 60 | 24 | 55 | 37 | 18 | 96 | 45 | 51 | 344 | 198 | 146 |
| 6 | ಕೋಲಾರ | 37 | 12 | 25 | 36 | 31 | 5 | 25 | 25 | 0 | 46 | 24 | 22 | 46 | 23 | 23 | 54 | 23 | 31 | 244 | 138 | 106 |
| 7 | ಚಿಕ್ಕಬಳ್ಳಾಪುರ | 59 | 12 | 47 | 22 | 18 | 4 | 19 | 19 | 0 | 43 | 32 | 11 | 38 | 20 | 18 | 56 | 18 | 38 | 237 | 119 | 118 |
| 8 | ದಾವಣಗೆರೆ | 74 | 13 | 61 | 31 | 27 | 4 | 18 | 18 | 0 | 82 | 61 | 21 | 63 | 43 | 20 | 94 | 45 | 49 | 362 | 207 | 155 |
| 9 | ಶಿವಮೊಗ್ಗ | 30 | 11 | 19 | 60 | 57 | 3 | 29 | 29 | 0 | 78 | 42 | 36 | 66 | 39 | 27 | 92 | 39 | 53 | 355 | 217 | 138 |
| 10 | ಮೈಸೂರು | 86 | 12 | 74 | 42 | 37 | 5 | 27 | 27 | 0 | 97 | 82 | 15 | 70 | 69 | 1 | 106 | 48 | 58 | 428 | 275 | 153 |
| 11 | ಮಂಡ್ಯ | 45 | 12 | 33 | 58 | 49 | 9 | 34 | 34 | 0 | 96 | 82 | 14 | 91 | 83 | 8 | 110 | 59 | 51 | 434 | 319 | 115 |
| 12 | ಚಾಮರಾಜನಗರ | 20 | 8 | 12 | 18 | 13 | 5 | 25 | 25 | 0 | 41 | 21 | 20 | 33 | 32 | 1 | 50 | 24 | 26 | 187 | 123 | 64 |
| 13 | ಚಿಕ್ಕಮಗಳೂರು | 36 | 7 | 29 | 36 | 34 | 2 | 35 | 35 | 0 | 55 | 46 | 9 | 67 | 59 | 8 | 69 | 31 | 38 | 298 | 212 | 86 |
| 14 | ಹಾಸನ | 40 | 10 | 30 | 52 | 49 | 3 | 39 | 39 | 0 | 117 | 63 | 54 | 75 | 71 | 4 | 133 | 73 | 60 | 456 | 305 | 151 |
| 15 | ದಕ್ಷಿಣ ಕನ್ನಡ | 28 | 6 | 22 | 28 | 23 | 5 | 20 | 20 | 0 | 65 | 30 | 35 | 33 | 11 | 22 | 70 | 2 | 68 | 244 | 92 | 152 |
| 16 | ಉಡುಪಿ | 27 | 8 | 19 | 22 | 17 | 5 | 14 | 14 | 0 | 46 | 14 | 32 | 35 | 11 | 24 | 48 | 5 | 43 | 192 | 69 | 123 |
| 17 | ಕೊಡಗು | 22 | 8 | 14 | 16 | 15 | 1 | 12 | 12 | 0 | 37 | 16 | 21 | 26 | 12 | 14 | 44 | 3 | 41 | 157 | 66 | 91 |
| 18 | ಬೆಳಗಾವಿ | 119 | 10 | 109 | 54 | 49 | 5 | 28 | 28 | 0 | 95 | 81 | 14 | 143 | 104 | 39 | 115 | 115 | 0 | 554 | 387 | 167 |
| 19 | ಉತ್ತರ ಕನ್ನಡ | 64 | 8 | 56 | 27 | 23 | 4 | 24 | 24 | 0 | 48 | 25 | 23 | 77 | 21 | 56 | 71 | 38 | 33 | 311 | 139 | 172 |
| 20 | ಹಾವೇರಿ | 72 | 9 | 63 | 57 | 56 | 1 | 25 | 25 | 0 | 66 | 24 | 42 | 65 | 20 | 45 | 74 | 22 | 52 | 359 | 156 | 203 |
| 21 | ಧಾರವಾಡ | 42 | 9 | 33 | 29 | 27 | 2 | 21 | 21 | 0 | 60 | 48 | 12 | 44 | 32 | 12 | 67 | 57 | 10 | 263 | 194 | 69 |
| 22 | ಗದಗ | 32 | 8 | 24 | 39 | 31 | 8 | 21 | 21 | 0 | 22 | 15 | 7 | 55 | 20 | 35 | 33 | 21 | 12 | 202 | 116 | 86 |
| 23 | ವಿಜಯಪುರ | 66 | 9 | 57 | 31 | 27 | 4 | 11 | 11 | 0 | 66 | 60 | 6 | 64 | 58 | 6 | 75 | 70 | 5 | 313 | 235 | 78 |
| 24 | ಬಾಗಲಕೋಟೆ | 35 | 8 | 27 | 47 | 44 | 3 | 28 | 28 | 0 | 51 | 47 | 4 | 77 | 60 | 17 | 62 | 57 | 5 | 300 | 244 | 56 |
| 25 | ಕಲಬುರ್ಗಿ | 108 | 79 | 29 | 23 | 9 | 14 | 15 | 15 | 0 | 92 | 88 | 4 | 96 | 96 | 0 | 112 | 90 | 22 | 446 | 377 | 69 |
| 26 | ಯಾದಗಿರಿ | 42 | 19 | 23 | 12 | 0 | 12 | 7 | 7 | 0 | 45 | 39 | 6 | 44 | 42 | 2 | 51 | 32 | 19 | 201 | 139 | 62 |
| 27 | ಬಳ್ಳಾರಿ | 87 | 44 | 43 | 22 | 6 | 16 | 28 | 28 | 0 | 43 | 26 | 17 | 82 | 37 | 45 | 63 | 33 | 30 | 325 | 174 | 151 |
| 28 | ರಾಯಚೂರು | 51 | 25 | 26 | 23 | 6 | 17 | 16 | 16 | 0 | 32 | 29 | 3 | 49 | 43 | 6 | 45 | 22 | 23 | 216 | 141 | 75 |
| 29 | ಕೊಪ್ಪಳ | 48 | 28 | 20 | 23 | 5 | 18 | 5 | 5 | 0 | 19 | 10 | 9 | 47 | 20 | 27 | 29 | 16 | 13 | 171 | 84 | 87 |
| 30 | ಬೀದರ್ | 81 | 74 | 7 | 35 | 31 | 4 | 12 | 12 | 0 | 21 | 19 | 2 | 67 | 64 | 3 | 31 | 31 | 0 | 247 | 231 | 16 |
| 31 | ಆಯುಕ್ತಾಲಯ | 0 | 0 | 0 | 0 | 0 | 0 | 25 | 25 | 0 | 0 | 0 | 0 | 0 | 0 | 0 | 0 | 0 | 0 | 25 | 25 | 0 |
| 32 | ರಾಜ್ಯ ವಲಯ ಜಂನಿ | 0 | 0 | 0 | 0 | 0 | 0 | 4 | 4 | 0 | 0 | 0 | 0 | 0 | 0 | 0 | 0 | 0 | 0 | 4 | 4 | 0 |
| 33 | ಕ್ಷೇತ್ರ ಮತ್ತು ತರಬೇತಿ ಕೇಂದ್ರಗಳು | 1 | 1 | 0 | 7 | 7 | 0 | 27 | 27 | 0 | 0 | 0 | 0 | 0 | 0 | 0 | 0 | 0 | 0 | 35 | 35 | 0 |
| | ಒಟ್ಟು | 1602 | 559 | 1043 | 1000 | 832 | 168 | 715 | 715 | 0 | 1825 | 1295 | 530 | 1847 | 1307 | 540 | 2144 | 1182 | 962 | 9133 | 5890 | 3243 |

ನಿರ್ದೇಶಕರು.